**ಸಿಸಿ.1967/2023** **ಪಿ.ಡಬ್ಲ್ಯೂ- 1**

**ದಿನಾಂಕಃ 26/02/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಬಿ.ಹೆಚ್.ವಿ ವಕೀಲರಿಂದ ಆರೋಪಿಯ ಪರವಾಗಿ.**

ಆರೋಪಿ ನನಗೆ 2019 ರಿಂದ ಪರಿಚಯಸ್ಥರು. ನನ್ನ ಸ್ನೇಹಿತರ ಕಡೆಯಿಂದ ನನಗೆ ಆರೋಪಿ ಪರಿಚಯ. ಈ ಫಿರ್ಯಾದನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಈ

ಫಿರ್ಯಾದನ್ನು ಸಲ್ಲಿಸುವ ಎಷ್ಟು ವರ್ಷಗಳ ಹಿಂದಿನಿಂದ ನಿಪಿ.1 ರ ಚೆಕ್ಕು ನಿಮ್ಮ ಬಳಿ ಇತ್ತು ಎಂದರೆ ಸಾಕ್ಷಿಯು ನನ್ನಲ್ಲಿ ಇರಲಿಲ್ಲ ಎಂದು ನುಡಿಯುತ್ತಾರೆ. ಆರೋಪಿಗೆ ನಾನು ಕೊಟ್ಟಿರುತ್ತೇನೆ ಎನ್ನುವ ಹಣ ನಾನು ಮನೆಯಲ್ಲಿ ಉಳಿತಾಯ ಮಾಡಿ ಇಟ್ಟಿದ್ದ ಹಣ ಆಗಿತ್ತು. ನಾನು ಟಾಟಾ ಕಂಪನಿಯಲ್ಲಿ ಟೆರಿಟೆರಿ ಸೇಲ್ಸ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದೇನೆ. ನಾನು ಪ್ರಸ್ತುತ ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ದಿ.02.05.2023 ರಂದು ನಾನು ಹೆಚ್.ಯು.ಎಲ್, ಹೊಳೆನರಸೀಪುರ ಇಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಕಂಪನಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ಹಣ ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಚೆಕ್ ಮೂಲಕ ಮಾಡುತ್ತೇನೆ ಎಂದರೆ ಸರಿ .

ದಿ. 02.05.2023 ರಂದು ಆರೋಪಿ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು. ನಾನು ಕೆನರಾ ಬ್ಯಾಂಕ್ ನಲ್ಲಿ ಮಾತ್ರ ಖಾತೆಯನ್ನು ಹೊಂದಿರುತ್ತೇನೆ. ದಿ.02.05.2023 ರಂದು ಆರೋಪಿಯಿಂದ ನಾನು ಒಂದು ಚೆಕ್ ಅನ್ನು ಮಾತ್ರ ಪಡೆದುಕೊಂಡಿರುತ್ತೇನೆ. ಸದರಿ ಚೆಕ್ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಬ್ಯಾಂಕ್ ನದ್ದು. ಈ ಫಿರ್ಯಾದಿನಲ್ಲಿ ಒಳಗೊಂಡ ವ್ಯವಹಾರಕ್ಕೆ ಸಂಬಂಧಿಸಿದಂತೆ ನನ್ನ ಹಾಗೂ ಆರೋಪಿಯ ಮದ್ಯೆ ಹೊಳೆನರಸೀಪುರ ನಗರ ಪೋಲೀಸ್ ಠಾಣೆಯಲ್ಲಿ ಒಂದು ಬಾರಿ ಮಾತುಕತೆ ಆಗಿತ್ತು ಎಂದರೆ ಸರಿ . ಆ ಸಮಯದಲ್ಲಿ ಆರೋಪಿ ನನಗೆ ಹಣವನ್ನು ಪೋಲೀಸರ ಮುಂದೆ ಕೊಟ್ಟಿದ್ದರು ಎಂದರೆ ಸರಿಯಲ್ಲ.

**( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು).**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.